14/09/2021
3.25 PM.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ:65:ಹೆಚ್‌ಪಿಸಿ:2021:ದಿನಾಂಕ:31.08.2021.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ:425:ಗ್ರೂಪ್-ಡಿ/2017-18/ನೇವಿ-1,ದಿನಾಂಕ:04.03.2018 ಮತ್ತು 22.11.2018.

******

<u>ಪ್ರಸ್ತಾವನೆ:</u>

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/2/ಟಿಎಫ್‌ಪಿ/2020.ದಿನಾಂಕ:01.04.2020ರಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ(55)(2)(ಡಿ)ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಈ ನಿಯಮದಡಿ ಯಾವುದೇ ಅಂಶಕಾಲಿಕ, ಅಕುಶಲ/ನಿಮಣ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂಧಿಸಿದೆ. ಕಾಲೇಜುಗಳಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹಂತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.

2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-034 ರಡಿಯಲ್ಲಿ ಮೂರನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಿರುವ ರೂ.248.50 ಲಕ್ಷಗಳಲ್ಲಿ 08 ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 13 "ಡಿ"ಗ್ರೂಪ್ ಸಿಬ್ಬಂದಿಗಳಿಗೆ ವೇತನ ಪಾವತಿಸಲು ರೂ.30,19,820/-(ಮೂವತ್ತು ಲಕ್ಷದ ಹತ್ತೊಂಬತ್ತು ಸಾವಿರ ಎಂಟು ನೂರ ಇಪ್ಪತ್ತು ರೂಪಾಯಿಗಳು)ಮಾತ್ರ ಅನುದಾನವನ್ನು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲು ಈ ಆದೇಶ:

<u>ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2021-22, ಬೆಂಗಳೂರು, ದಿನಾಂಕ:14.09.2021</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ:2202-03-103-2-01-034ರಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ "ಡಿ"ಗ್ರೂಪ್ ಸಿಬ್ಬಂದಿಗಳ ವೇತನ ಪಾವತಿಗಾಗಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಪಟ್ಟಿಯಲ್ಲಿರುವ 08 ಕಾಲೇಜುಗಳಿಗೆ ರೂ.30,19,820/-(ಮೂವತ್ತು ಲಕ್ಷದ ಹತ್ತೊಂಬತ್ತು ಸಾವಿರ ಎಂಟು ನೂರ ಇಪ್ಪತ್ತು ರೂಪಾಯಿಗಳು) ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರುಗಳಿಗೆ ಈ ಕೆಳಕಂಡ ಷರತ್ತುಗಳನ್ವಯ ಬಿಡುಗಡೆ ಮಾಡಲಾಗಿದೆ.

(ಇ-ಕಡತದಲ್ಲಿ ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿರುತ್ತದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಷರತ್ತುಗಳು:

1."ಡಿ"ಗ್ರೂಪ್ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸುವಾಗ ಕನಿಷ್ಠ ವೇತನ ಕಾಯ್ದೆ, ಇಎಸ್‌ಐ & ಪಿ.ಎಫ್‌ಕಾಯ್ದೆಯನ್ನು ಪಾಲಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

2.ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.

3.ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.

4.ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಇವರಿಗೆ:

1) ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು-ಅಂತರ್ಜಾಲದಲ್ಲಿ ಪ್ರಕಟಿಸಲು

ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ಹೊ.ಗು.ಅ/10/2021-22, ಬೆಂಗಳೂರು, ದಿನಾಂಕ:14.09.2021

ಆದೇಶಕ್ಕೆ ಅನುಬಂಧ

13 ಹೊರಗುತ್ತಿಗೆ "ಡಿ" ಗ್ರೂಪ್ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನ ಪಾವತಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು.

| ಕ್ರ. ಸಂ. | ಕಾಲೇಜಿನ ಹೆಸರು | ಹುದ್ದೆ | ಸಿಬ್ಬಂದಿ ಸಂಖ್ಯೆ | ಅನುದಾನ ಕೋರಿರುವ ಅವಧಿ | ಈ ಹಿಂದೆ ಮಾರ್ಚ್-2021ರಲ್ಲಿ ಅನುದಾನ ಬಿಡುಗಡೆ ಮಾಡಿರುವ ಮೊತ್ತ | ಬಿಡುಗಡೆ ಮಾಡಲು ಕೋರಿರುವ ಮೊತ್ತ |
|---|---|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುಣಕಲ್‌ಬಿದರಿ | ಗ್ರೂಪ್-ಡಿ | 2 | 2018-19, 2019-20, 2020-21 ಒಟ್ಟು 36 ತಿಂಗಳು | - | 10,85,400 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಗಿರಿ | ಗ್ರೂಪ್-ಡಿ | 1 | ಏಪ್ರಿಲ್-2020 ರಿಂದ ಮಾರ್ಚ್-2021 (12 ತಿಂಗಳು) | - | 3,68,616 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು | ಗ್ರೂಪ್-ಡಿ | 1 | 01-02-02020 ರಿಂದ 31.03.2021 | - | 1,38,850 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ ಬಾಗೇವಾಡಿ | ಗ್ರೂಪ್-ಡಿ | 1 | ಮಾರ್ಚ್-2021 ರಿಂದ ಜುಲೈ-2021 | 1,38,850 | 83,310 |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ | ಗ್ರೂಪ್-ಡಿ & ಪ್ರಯೋಗಾಲಯ ಸಹಾಯಕರು | 2 | ಏಪ್ರಿಲ್-2020 ರಿಂದ ಮಾರ್ಚ್-2021 (12 ತಿಂಗಳು) | - | 3,68,016 |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತ್ಯಾಮಗೊಂಡ್ಲು | ಡೇಟಾ ಎಂಟ್ರಿ ಆಪರೇಟರ್ & ಗ್ರೂಪ್-ಡಿ | 2 | ಏಪ್ರಿಲ್-2020 ರಿಂದ ಮಾರ್ಚ್-2021 (12 ತಿಂಗಳು) | 3,06,680 | 1,53,340 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಮುಟಾ | ಡೇಟಾ ಎಂಟ್ರಿ ಆಪರೇಟರ್ & ಪ್ರಯೋಗಾಲಯ ಸಹಾಯಕರು | 2 | ಸೆಪ್ಟೆಂಬರ್-2020 ರಿಂದ ಆಗಸ್ಟ್-2021 | 1,92,156 | 4,54,272 |
| 8 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಕಿ | ಡೇಟಾ ಎಂಟ್ರಿ ಆಪರೇಟರ್ & ಗ್ರೂಪ್-ಡಿ | 2 | ಜೂನ್-2020 ರಿಂದ ಮಾರ್ಚ್-2021 & ಜುಲೈ-2021 ರಿಂದ ಆಗಸ್ಟ್-2021 | - | 3,68,016 |
| | | | 13 | | | 30,19,820 |

(ಮೂವತ್ತು ಲಕ್ಷದ ಹತ್ತೊಂಭತ್ತು ಸಾವಿರ ಎಂಟು ನೂರ ಇಪ್ಪತ್ತು ರೂಪಾಯಿಗಳು)

ಕಾಲೇಜು ಶಿಕ್ಷಣ ನಿರ್ದೇಶಕರು

D:\Manjula2021-22\out source 45 college grant order 2021-22.docx